ಜಿಲ್ಲಾ ಸಶಸ್ತ್ರ ಮೀಸಲು ಪಡೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 31 (291)

ಸದಸ್ಯರ ಹೆಸರು : ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ)

ಉತ್ತರಿಸುವ ಸಚಿವರು : ಶ್ರೀ ಅಶೋಕ್ ಆರ್. (ಗೃಹ ಮತ್ತು ಸಾರಿಗೆ ಸಚಿವರು)

ಪ್ರಶ್ನೆಗಳು:–

ಅ) ಬಾಗಲಕೋಟೆ ಜಿಲ್ಲೆಯಿಂದ ಸುಮಾರು 100 ರಿಂದ 120 ಕಿ.ಮೀ. ಅಂತರದಲ್ಲಿರುವ ಉಪವಿಭಾಗ ಕೇಂದ್ರವಾದ ಬೃಹತ್‌ನಗರ ಜಮಖಂಡಿಯಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕಛೇರಿ ಹಾಗೂ ಸಂಚಾರಿ ನಿಯಂತ್ರಣಕ್ಕಾಗಿ ಸಂಚಾರಿ ಪೊಲೀಸ್ ಠಾಣೆ ಪ್ರಾರಂಭಿಸುವ ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಜಿಲ್ಲಾ ಸಶಸ್ತ್ರ ಮೀಸಲು ಪಡೆ ಉಪ ಕೇಂದ್ರ ಕಛೇರಿ ಮತ್ತು ಸಂಚಾರಿ ಪೊಲೀಸ್ ಠಾಣೆ ಪ್ರಾರಂಭಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಉತ್ತರಗಳು:–

ಅ) ಬಂದಿದೆ.

ಆ) ಪ್ರಸ್ತುತ ಬಾಗಲಕೋಟೆ ಜಿಲ್ಲಾ ಅಶಸ್ತ್ರ ಮೀಸಲು ಪಡೆಯು ಬಾಗಲಕೋಟೆ ನಗರದಲ್ಲಿದ್ದು, ವಿವಿಧ ದರ್ಜೆಯ 340 ಸಿಬ್ಬಂದಿಗಳ ಮಂಜೂರಾತಿ ಬಲವಿರುತ್ತದೆ. ಜಮಖಂಡಿ ನಗರವು ಬಾಗಲಕೋಟೆ ಜಿಲ್ಲಾ ಕೇಂದ್ರದಿಂದ 85 ಕಿ.ಮೀ. ದೂರದಲ್ಲಿದ್ದು, ಪೊಲೀಸ್ ಮಹಾನಿರೀಕ್ಷಕರು, ಉತ್ತರ ವಲಯ, ಬೆಳಗಾವಿರವರ ಅಭಿಪ್ರಾಯದಂತೆ ಜಮಖಂಡಿ ಪಟ್ಟಣದಲ್ಲಿ ಜಿಲ್ಲಾ ಮೀಸಲು ಪಡೆಯ ಉಪಕೇಂದ್ರವನ್ನು ಸ್ಥಾಪಿಸುವುದರಿಂದ ಹೆಚ್ಚಿನ ಆರ್ಥಿಕ ಹೊರೆಯಾಗುವುದರಿಂದ ಇದಕ್ಕೆ ಬದಲಾಗಿ, ಬಾಗಲಕೋಟೆ ಜಿಲ್ಲಾ ಸಶಸ್ತ್ರ ಮೀಸಲು ಪಡೆಗೆ ಹೆಚ್ಚುವರಿಯಾಗಿ ಸಿಬ್ಬಂದಿಗಳನ್ನು

ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದ ವಿವಿಧ ಸ್ಥಳಗಳಲ್ಲಿ ಸಂಚಾರಿ ಪೊಲೀಸ್ ಠಾಣೆಗಳನ್ನು ತೆರೆಯುವ ಬಗ್ಗೆ ಬೇಡಿಕೆಗಳು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಸಂಪನ್ಮೂಲ ಕೊರತೆಯಿಂದ ಒಂದೇ ಹಂತದಲ್ಲಿ ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ. ಸಂಪನ್ಮೂಲದ ಲಭ್ಯತೆಯ ಮೇಲೆ ಹಂತ ಹಂತವಾಗಿ ರಾಜ್ಯದಲ್ಲಿ ಸಂಚಾರಿ ಪೊಲೀಸ್ ಠಾಣೆಗಳನ್ನು ತೆರೆಯುವ ಪ್ರಸ್ತಾವನೆಗಳಿಗೆ ಸರ್ಕಾರದ ಮಂಜೂರಾತಿ ನೀಡಲಾಗುತ್ತಿದೆ. ಆಯಾ ಆರ್ಥಿಕ ವರ್ಷದ ಆಯವ್ಯಯದಲ್ಲಿ ಕಲ್ಪಿಸಲಾದ ಅನುದಾನವನ್ನು ಹಿಂದಿನ ಆರ್ಥಿಕ ವರ್ಷಗಳಲ್ಲಿ ಸ್ಥಾಪಿಸಲು ಮಂಜೂರಾತಿ ನೀಡಿದ ಪೊಲೀಸ್ ಠಾಣೆಗಳನ್ನು ತೆರೆಯುವ ವೆಚ್ಚವನ್ನು ಭರಿಸಲು ಸಾಕಾಗುತ್ತದೆ. ಪ್ರಸ್ತುತ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಅಧಿಕಾರಿ ವೇತನ ಸಮಿತಿಯ ವರದಿಯು ಬರುವ ತನಕ ಯಾವುದೇ ಹುದ್ದೆಗಳ ಸೃಜನೆ ಅಥವಾ ಹುದ್ದೆಗಳ ಮೇಲ್ದರ್ಜೆಯನ್ನು ಸಂಪೂರ್ಣವಾಗಿ ತಡೆಯಿಡಿಯುವ ಅರಿವಿನ ನಿರ್ಣಯ (Conscious Decision) ತೆಗೆದುಕೊಂಡಿದೆ. ಆದ್ದರಿಂದ 2012–13ನೇ ಹಣಕಾಸು ವರ್ಷದ ಮೊದಲನೇ ತ್ರೈಮಾಸಿಕ ಅವಧಿಯಲ್ಲಿ ಜಮಖಂಡಿಯಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆಯನ್ನು ಆದ್ಯತೆಯ ಮೇಲೆ ಪರಿಶೀಲಿಸಲಾಗುವುದು.

(ಗೊಂದಲ)

ಶ್ರೀ ಆರ್.ಅಶೋಕ್:– ಸನ್ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ತಾಲ್ಲೂಕಿಗೆ ಸಶಸ್ತ್ರ ಪಡೆಯನ್ನು ಕೇಳುತ್ತಿದ್ದಾರೆ. ಆದರೆ, ಸಶಸ್ತ್ರ ಪಡೆ ಈಗಾಗಲೇ ಜಿಲ್ಲಾ ಕೇಂದ್ರದಲ್ಲಿರುವುದರಿಂದ ಅಲ್ಲಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ ಸಂಚಾರಿ ಪೊಲೀಸ್ ಠಾಣೆಯನ್ನು ಈಗಾಗಲೇ...

(ಗೊಂದಲ)

ಅಧ್ಯಕ್ಷರು:– ಈಗ ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ. ಈಗ ಅವರೇನಾದರೂ ಅಡ್ಡಿಪಡಿಸಿದರೆ ಅವರನ್ನು ಹೊರಕ್ಕೆ ಹಾಕುತ್ತೇನೆ. ನಾನು ಕೇಳುವುದೇನೆಂದರೆ, ಪ್ರಸ್ತಾಪ ಮಾಡುವುದಕ್ಕೆ ಒಂದು ನೋಟಿಸ್‌ನ್ನು ಅವರು ಕೊಡಬೇಕೋ ಅಥವಾ ಬೇಡವೋ ಹೇಳಿ?

ಶ್ರೀ ಸಿದ್ದರಾಮಯ್ಯ:– ಅವರಿಗೂ ಅವಕಾಶ ಕೊಡಿ.

ಅಧ್ಯಕ್ಷರು:– ಪ್ರಸ್ತಾಪ ಮಾಡುವುದಕ್ಕೆ ಅವರು ನೋಟಿಸನ್ನು ಕೊಡಬೇಕೋ ಬೇಡವೋ;

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಪ್ರಸ್ತಾಪ ಮಾಡುವ ಸಲುವಾಗಿ ಅವಕಾಶ ಕೊಡುವುದಕ್ಕೆ ನಿಮಗೆ ವಿಶೇಷವಾದ ಅಧಿಕಾರವಿಲ್ಲವೋ? Don't you have inherent power?

ಅಧ್ಯಕ್ಷರು:– ವಿಶೇಷ ಅವಕಾಶದ ಪ್ರಶ್ನೆ ಅಲ್ಲ. ನೋಟಿಸ್ ಕೊಡಬೇಕಲ್ಲವೇ? ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿ.

(ಗೊಂದಲ)

Mr.SPEAKER:- That is different.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಸಿ.ಪಿ.ಸಿ.151 ಅನ್ನು ಚಲಾಯಿಸಿ.

Mr.SPEAKER:- If there is no provision, CPC ಹೇಗೆ ಚಲಾಯಿಸುವುದು?

Sri SIDDARAMAIAH:- You need not. You have got inherent power under the rules. That is left to you.

Mr.SPEAKER:- When there is no specific provision, how can I apply?

ಶ್ರೀ ಸಿದ್ದರಾಮಯ್ಯ:–ಪಾಪ, ಅವರಿಗೆ ಅನ್ಯಾಯ ಮಾಡಿದ್ದೀರಿ ನೀವು.

Dr.H.C.MAHADEVAPPA:- Sir, Please use your discretionary power judiciously. Please allow them to have their say.

ಅಧ್ಯಕ್ಷರು:- ನಿಯಮದಲ್ಲಿ ಅವಕಾಶ ಇದ್ದಿದ್ದರೆ ಖಂಡಿತ ಕೊಡುತ್ತಿದ್ದೆ. ಈಗ ಮತ್ತೆ ಚರ್ಚೆ ಬೇಡ.

Dr.H.C.MAHADEVAPPA:- They are the most victims of the order passed by your kindself. They are instrumental in the formation of the BJP Government and they have become the worst victims.

ಶ್ರೀ ಆರ್.ಅಶೋಕ್:- ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ಶ್ರೀಕಾಂತ್ ಕುಲಕರ್ಣಿ ರವರು District Armed Reserve Police Force ಅನ್ನು ತಾಲ್ಲೂಕು ಕೇಂದ್ರದಲ್ಲಿ ಬೇಕೆಂದು ಈಗಾಗಲೇ ಕೇಳಿದ್ದಾರೆ. ಈ ರೀತಿ ತಾಲ್ಲೂಕು ಕೇಂದ್ರದಲ್ಲಿ District Armed Reserve Police Force ಇಡುವಂತಹ ವ್ಯವಸ್ಥೆ ಇಲ್ಲ. ಎಲ್ಲಾ ಜಿಲ್ಲಾ ಕೇಂದ್ರದಲ್ಲಿ District Armed Reserve Police Force ಈಗಾಗಲೇ ಇದೆ. ಹೆಚ್ಚುವರಿಯಾಗಿ ಬೇಕಾದರೆ Reserve Police ಸಂಖ್ಯೆ ಕಡಿಮೆಯಿದ್ದರೆ ಸಂಖ್ಯೆಯನ್ನು ಜಾಸ್ತಿ ಮಾಡುವ ಬಗ್ಗೆ ಮುಂದಿನ ದಿವಸಗಳಲ್ಲಿ ಯೋಚನೆ ಮಾಡುತ್ತೇವೆ. ಅದೇ ರೀತಿ ತಾಲ್ಲೂಕುಗಳಿಗೋಸ್ಕರ ಸಂಚಾರಿ ಪೊಲೀಸ್ ಠಾಣೆಯನ್ನು ಕೂಡ ಕೇಳಿದ್ದೀರಿ. ಸಂಚಾರಿ ಪೊಲೀಸ್ ಠಾಣೆ ಬಗ್ಗೆ ಕಳೆದ 2–3 ವರ್ಷಗಳಲ್ಲಿ ಬಹಳಷ್ಟು ತಾಲ್ಲೂಕುಗಳಿಗೆ ಬೇಡಿಕೆಗಳು ಬಂದಿವೆ. ತಾಲ್ಲೂಕು Highways ಮತ್ತು District Highways ನಲ್ಲಿ ಟ್ರಾಫಿಕ್ ಜಾಸ್ತಿಯಾಗಿರುವುದರಿಂದ ಎಲ್ಲಾ ತಾಲ್ಲೂಕುಗಳಲ್ಲೂ ಈ ರೀತಿಯಾದ ಸಂಚಾರಿ ಪೊಲೀಸ್ ಠಾಣೆ ಬೇಕೆಂಬ ಬೇಡಿಕೆಯನ್ನಿಟ್ಟಿದ್ದಾರೆ. ಈ ಬೇಡಿಕೆಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಎಲ್ಲಾ ತಾಲ್ಲೂಕು ಕೇಂದ್ರದಲ್ಲೂ ಟ್ರಾಫಿಕ್ ಜಾಸ್ತಿಯಾಗಿರುವುದರಿಂದ at least ಒಂದೊಂದು ಸ್ಟೇಷನ್‌ನ್ನಾದರೂ ಎಲ್ಲೆಲ್ಲಿ ಟ್ರಾಫಿಕ್ ಜಾಸ್ತಿಯಿದೆಯೋ ಅಲ್ಲಲ್ಲಿ ಕೊಡಬೇಕು

ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿದ್ದೇನೆ. ನೀವು ಹೇಳಿರುವಂತೆ ಜಮಖಂಡಿಗೆ ಆದ್ಯತೆಯ ಮೇರೆಗೆ ಟ್ರಾಫಿಕ್ ಪೊಲೀಸ್ ವ್ಯವಸ್ಥೆ ತರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್:– ಮಾನ್ಯ ಅಧ್ಯಕ್ಷರೆ, ಜಮಖಂಡಿ ನಗರದಲ್ಲಿ ಜನಸಂಖ್ಯೆ ತುಂಬಾ ಜಾಸ್ತಿಯಾಗಿರುವುದರಿಂದ ಮತ್ತು ಕೃಷ್ಣಾ ನದಿಯ ಮುಳುಗಡೆ ಪ್ರದೇಶದ ಜನ ಜಮಖಂಡಿಯ ಸುತ್ತಮುತ್ತ ಬಂದಿರುವುದರಿಂದ ಹಾಗೂ ಜಮಖಂಡಿಯ ಸುತ್ತಮುತ್ತ ನಾಲ್ಕೈದು ಷುಗರ್ ಫ್ಯಾಕ್ಟರಿಗಳಿರುವುದರಿಂದ ಬಹಳಷ್ಟು ವಾಹನಗಳು ಓಡಾಡುವುದಕ್ಕೆ ತೊಂದರೆಯಾಗುತ್ತಿದೆ. ಟ್ರಾಫಿಕ್ ಕಂಟ್ರೋಲ್ ಮಾಡುವುದಕ್ಕೆ ಈಗಿರುವಂತಹ ಪೊಲೀಸ್ ಇಲಾಖೆಗೆ ಆಗುತ್ತಿಲ್ಲ ಹೀಗಾಗಿ ಮೊದಲ ಆದ್ಯತೆಯನ್ನು ಜಮಖಂಡಿಗೆ ಕೊಟ್ಟು ಯಾವಾಗ ಸಂಚಾರಿ ಪೊಲೀಸ್ ಠಾಣೆಯನ್ನು ಪ್ರಾರಂಭ ಮಾಡುತ್ತೀರಿ ಎನ್ನುವ ಅವಧಿಯನ್ನು ಹೇಳಿದರೆ ಸೂಕ್ತವೆಂದು ತಮ್ಮನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ಅಶೋಕ್:– ಆದ್ಯತೆ ಕೊಡಬೇಕೆಂಬ ತೀರ್ಮಾನ ಸರ್ಕಾರ ಮಾಡಿದೆ. ಆದುದರಿಂದ ಈ ಬಾರಿ ಬಜೆಟ್‌ನಲ್ಲಿ ಆರ್ಥಿಕ ಇಲಾಖೆಯವರು ಏನು Provision ಮಾಡುತ್ತಾರೆ, ಅದನ್ನು ನೋಡಿಕೊಂಡು ಜಮಖಂಡಿಯಲ್ಲಿ ಟ್ರಾಫಿಕ್ ಪೊಲೀಸ್ ಮಾಡುವುದಕ್ಕೆ ಮೊದಲ ಆದ್ಯತೆಯನ್ನು ಕೊಡುತ್ತೇವೆ.

ಅಧ್ಯಕ್ಷರು:– ಮುಂದಿನ ಪ್ರಶ್ನೆ ಮಾನ್ಯ ಗೂಳಿಹಟ್ಟಿ ಶೇಖರ್‌ರವರದು ಇದೆ. ಆದರೆ, ಮಾನ್ಯ ಸದಸ್ಯರು ಹಾಜರಿಲ್ಲ.